ನಂಬಿಸಿಕೊಳ್ಳುತ್ತಿದ್ದಳಾ? ಯಾವ ಗಂಡಸಿಗೂ ಕಡಿಮೆ ಇಲ್ಲದಂತೆ , ಯಾವ ಅರೆಕೊರೆಯೂ ಕಾಡದಂತೆ, ಹೆತ್ತಮ್ಮನಾಗಿ, ಪೋಷಿಸುವ ತಂದೆಯಾಗಿ ಮಕ್ಕಳನ್ನು ಬೆಳೆಸಿ ದೊಡ್ಡ ಮಾಡಿದಳು ಅಮ್ಮ. ತಾನೊಬ್ಬ ಅಬಲೆ, ಅಸಹಾಯಕಳಾದ ಹೆಣ್ಣುಹೆಂಗಸು ಎಂಬುದನ್ನೇನಾದರೂ ಅಮ್ಮ ಮನಸ್ಸಿಗೆ ತಂದುಕೊಂಡು ಬೆದರಿದ ಗುಬ್ಬಚ್ಚಿಯಂತಾಗಿಬಿಟ್ಟಿದ್ದರೆ ಹಿರಿದು ತಿನ್ನುವವರು ಬೇಕಾದಷ್ಟು ಜನ ಹುಟ್ಟಿಕೊಳ್ಳುತ್ತಿದ್ದರೇನೋ. ಅಂತದಕ್ಕೆ ಆಸ್ಪದ ಕೊಡಲಿಲ್ಲ ಅಮ್ಮ. ಯಾರನ್ನೂ ನಂಬಲು ಹೋಗದೆ, ಹತ್ತಿರ ಬಿಟ್ಟುಕೊಳ್ಳದೆ, ಹಳಿ ತಪ್ಪಬಹುದಾಗಿದ್ದ ಬಂಡಿಯನ್ನು ಸಲೀಸಾಗಿ ಮುನ್ನಡೆಸಿದ್ದಳು. ತನ್ನಮ್ಮನ ಈ ಗಟ್ಟಿತನದ ಕುರಿತು ಇವತ್ತಿಗೂ ರಾಮಚಂದ್ರನಿಗೆ ಕೌತುಕ ಮತ್ತು ಕೃತಜ್ಞತೆ ಎರಡೂ ಇವೆ. ಎಂತಾ ಕೈಕಾಲುಗೆಡುವ ಸಂದರ್ಭದಲ್ಲೂ ಧೃತಿಗೆಡದೆ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು ಮತ್ತು ತನ್ನ ಪಾಲಿಗೆ ಬಂದ ಬದುಕಿನ ಕುರಿತು ಗೊಣಗದೆ ಅದು ಬಂದಂತೆ ಸ್ವೀಕರಿಸಬೇಕು. ಇದು ಬದುಕಿನ ಕುರಿತಾಗಿ ರಾಮಚಂದ್ರ ತನ್ನ ಅಮ್ಮನಿಂದ ಕಲಿತ ಪಾಠ. ಗೊಣಗುತ್ತಿರಲಿಲ್ಲವೇ ಅಮ್ಮ? ಅವಳ ಕನಸಿಗೆ ಕೊಳ್ಳಿ ಇಡುವಂತೆ ಹಿರಿ ಮಗ ತನ್ನ ಸಂಗಾತಿಯನ್ನು ತಾನೇ ಆಯ್ದುಕೊಂಡಾಗ ಗೊಣಗಿದ್ದಳು ಅಮ್ಮ. ಕೊಂಕಿನ ಮಾತಾಡಿದ್ದಳು ಅಮ್ಮ. ಆದರೆ ಅದೆಲ್ಲಾ ತತ್ಕಾಲದ ಒಂದು ಮನೋ ವೈಪರೀತ್ಯವೆಂಬಂತೆ ಬಂದಿದ್ದಕ್ಕೆ ಹೊಂದಿಕೊಂಡು, ಏನೇ ಆದರೂ ತನ್ನಮ್ಮ ಕೂಡಾ ಮಾನವ ಮಾತ್ರಳು ಅನ್ನುವುದು ಸತ್ಯ ತಾನೇ? ತನ್ನ ದೃಷ್ಟಿಗೆ ಅವಳು ಆದರ್ಶಪ್ರಾಯಳಾಗಿ ಕಂಡಂತೆ ಎಲ್ಲರಿಗೂ ಕಾಣಬೇಕಾದ್ದಿಲ್ಲ. ಒಬ್ಬರ ಕಣ್ಣಲ್ಲಿ ಒಳ್ಳೆಯವರೆನಿಸಿಕೊಂಡವರು ಮತ್ತೊಬ್ಬರ ಕಣ್ಣಲ್ಲಿ ಕೆಟ್ಟವರಾಗಿ ಕಂಡರೆ ಆಶ್ಚರ್ಯವಿಲ್ಲ. ಆಯಾಯಾ ಸಂಬಂಧಗಳ ಸ್ವರೂಪದಲ್ಲಿ ಗುಣದೋಷಗಳು ನಿರ್ಧಾರವಾಗುವುದು ಮಾನವ ಸಹಜ ಸಂಗತಿ. ಅಪ್ಪನಾಗಿ, ಅಮ್ಮನಾಗಿ ಎರಡೆರಡು ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಿದವಳ ಕುರಿತು ಮಗನಾದ ತನಗೆ ಆದರ, ಗೌರವ ಒಂದು ಪಾಲು ಹೆಚ್ಚಾಗಿಯೇ ಇದ್ದರೆ ಆಶ್ಚರ್ಯವೇನು ಅಂದುಕೊಳ್ಳುತ್ತಾನೆ ರಾಮಚಂದ್ರ.

* * *

ಮಧ್ಯಸ್ಥಿಕೆ ವಹಿಸಿಕೊಂಡು ಹೋದ ಬ್ರಾಹ್ಮಣ ಶುಭ ಸುದ್ದಿಯೊಂದಿಗೆ ಮನೆ ಹೊಕ್ಕಿದ್ದರು. ಜಾತಕ ನೋಡಿಸಬೇಕಾದ ಪಂಚಾಯಿತಿಕೆಯೇ ಇಲ್ಲ. ಹುಡುಗಿ ಅನುರಾಧಾ ನಕ್ಷತ್ರದವಳು. ಮಹಾನಕ್ಷತ್ರಕ್ಕೆ ಎಲ್ಲಾ ಜಾತಕವೂ ಹೊಂದಾಣಿಕೆಯಾಗುತ್ತೆ. ವಿಷಯ ಹೀಗಿದ್ದರೂ ಐತಾಳರು ಹುಡುಗಿಯ ಜಾತಕವನ್ನು ಕೇಳಿ ತೆಗೆದುಕೊಂಡು ಬಂದಿದ್ದರು. ಜಾತಕ ಕೊಟ್ಟಿದ್ದಾರೆ ಅಂದರೆ ಸಂಬಂಧ ಬೆಳೆಸಲು ಅವರ ಅಭ್ಯಂತರವಿಲ್ಲ ಎನ್ನುವ ಸೂಚನೆ. ಐತಾಳರು ತಮ್ಮ ಮನೆತನದ ಬಗ್ಗೆ ಒಳ್ಳೆಯ ಮಾತುಗಳನ್ನಾಡಿರಬಹುದಾದ ಕುರಿತು ಅಮ್ಮನಿಗೆ ಕೃತಜ್ಞತೆ. ಪೆಟ್ಟಿಗೆಯೊಳಗಿದ್ದ ರಾಮಚಂದ್ರನ ಜಾತಕ ಬೆಳಕು ಕಂಡಿತ್ತು. ಅಡಿಕೆ ಸಂಭಾವನೆಗೆಂದು ಮನೆ ಮನೆ ಮೆಟ್ಟಲು ಹತ್ತಿಳಿಯುವ ಕೆಲವರಲ್ಲಿ ಅಲ್ಪಸ್ವಲ್ಪ ಜ್ಯೋತಿಷ ಜ್ಞಾನವಿದ್ದವರು ಇದ್ದೇ ಇರುತ್ತಿದ್ದರು. ಅಂತವರು ತಾವು ಹೋದಲ್ಲಿ ಒಂದೊಪ್ಪತ್ತು ಹೆಚ್ಚಿಗೆ ಮೊಕ್ಕಾಂ ಹೂಡಿ ಮನೆ ಯಜಮಾನನ ಅಪೇಕ್ಷೆಯಂತೆ ಮನೆಮಂದಿಯ ಜಾತಕ ಪರಿಶೀಲಿಸುತ್ತಿದ್ದರು. ಯಾರಿಗೆ ಗುರುಬಲ ಬಂದಿದೆ? ಯಾರಿಗೆ ಸಂಧಿಕಾಲ? ಯಾರಿಗೆ ಶಾಂತಿ ಆಗಬೇಕು? ಮುಂತಾದುವುಗಳ ಕುರಿತು ಸಂಬಂಧಿಸಿದವರ ಜಾತಕ ಎದುರಿಗಿಟ್ಟುಕೊಂಡು ಮಾಹಿತಿ ಕೊಡುತ್ತಿದ್ದರು.

ಮೈಯೆಲ್ಲಾ ಕಿವಿಯಾಗಿ ಕೇಳಿಸಿಕೊಳ್ಳುತ್ತಿದ್ದಿದ್ದು ಮನೆಯ ಯಜಮಾನ ಮಾತ್ರಾ ಅಲ್ಲ, ಮನೆಯ ಹೆಮ್ಮಕ್ಕಳಿಗೂ ಈ ಕುರಿತಾಗಿ ತಿಳಿದುಕೊಳ್ಳುವ ಕುತೂಹಲ ಇರುತ್ತಿತ್ತು. ಭವಿಷ್ಯ ಕೇಳುವುದೆಂದರೆ ಯಾರಿಗೆ ಕೈಂಯಿ? ಬದಲಿಗೆ ಮೈಯೆಲ್ಲಾ ಕಿವಿ. ಮದುವೆಗೆ ನೆರೆದು ನಿಂತ ಹುಡುಗಿಯಾದರೆ ಅವಳ ಜಾತಕದಲ್ಲಿ ಗುರುಬಲ ಶುರುವಾಗಿದೆ ಎನ್ನುವ ಸುದ್ದಿ ಕಿವಿ ತಲುಪಿತು ಅಂದರೆ ಮೈ ತುಂಬಾ ಪುಳಕ. ಗುರುಬಲ ಬಂದಿದೆ ಅಂದರೆ ತನ್ನಪ್ಪ ಜಾತಕ ಹೊರಡಿಸಲು ತಯಾರಾಗುತ್ತಾನೆ ಎನ್ನುವ ಲೆಕ್ಕ. ಹುಡುಗಿ ಆವಾಗಿನಿಂದಲೇ ಕನಸು ಕಾಣಲು ಶುರು ಮಾಡುತ್ತಿದ್ದಳು.

ನಾಗಶ್ರೀಯ ಜಾತಕ ರಾಮಚಂದ್ರನ ಜಾತಕದೊಂದಿಗೆ ಹೇಳಿ ಮಾಡಿಸಿದಂತೆ ಹೊಂದಿಕೊಂಡಿತು. ಐತಾಳರ ಜ್ಯೋತಿಷ್ಯ ಜ್ಞಾನದ ಪ್ರಕಾರ. ಏಕಾಧಿಪತ್ಯ ಎಂದು ಐತಾಳರು ಹೇಳಿದ್ದು ಇನ್ನೂ ರಾಮಚಂದ್ರನ ಕಿವಿಯಲ್ಲಿ ನಿನ್ನೆ ಮೊನ್ನೆ ಕೇಳಿಸಿದಂತಿದೆ.

'ಅವರು ಯಾರು, ಎತ್ತ, ಒಂದೂ ಗೊತ್ತಿಲ್ಲ ನಮ್ಗೆ. ಪರಿಚಯ ಮಾಡ್ಸಿಕೊಡೋದು ನಿಮ್ದೇ ಜವಾಬ್ದಾರಿ. ನಿಮ್ಮ ಋಣ ಇಟ್ಗೊಳ್ಳಲ್ಲ ನಾನು..' ಬೆಣ್ಣೆ ಹಚ್ಚುವ ಮಾತಾಡಿದ್ದಳು ಅಮ್ಮ. ರಾಮಚಂದ್ರನ ಹೃದಯ ಆಗಲೇ ಗರಿಗೆದರಿದ ಬಾನಾಡಿಯಂತಾಗಿತ್ತು. ನಾಗಶ್ರೀಯ ಮನೆ ಹೊಕ್ಕು ಅವಳನ್ನು ನೋಡಿಕೊಂಡು ಬಂದುಬಿಟ್ಟಿತ್ತು.

'ಚಂದ ಗಿಂದ ಅಂತ ಕುಣೀಬೇಡ ನೀನು. ಹುಡುಗಿ ಸುಮಾರಾಗಿದ್ರೆ ಸಾಕು, ಕಣ್ಣು ಮುಚ್ಗಂಡು ಒಪ್ಗಂಬಿಡು. ಇಂತಾ ಅದೃಷ್ಟ ಭಾಳ ಜನಕ್ಕೆ ಸಿಕ್ಕಲ್ಲ. ಒಬ್ಳೇ ಮಗಳು ಅಂದ ಮೇಲೆ ಎಷ್ಟು ಜನ ಬಲೆ ಬೀಸೋಕೆ ಕಾದು ಕೂತಿರ್ತಾರೋ?' ಅಮ್ಮ ಎಷ್ಟು ಸರ್ತಿ ತಿರುಗಾಮುರುಗಾ ಈ ಮಾತನ್ನು ರಾಮಚಂದ್ರನ ಕಿವಿಗೆ ಎರೆದಿದ್ದಳೋ? ಹಣ ಅಂದ್ರೆ ಹೆಣ ಕೂಡಾ ಬಾಯ್ಬಿಡುತ್ತಂತೆ ಎನ್ನುವ ಗಾದೆ ಮಾತು ನೆನಪಾಗಿತ್ತು ರಾಮಚಂದ್ರನಿಗೆ. ಅವನಿಗೇನು ಹಣದ ವ್ಯಾಮೋಹ ಇರಲಿಲ್ಲವೇ? ಇದ್ದೇ ಇತ್ತು. ಲಕ್ಷ್ಮಿ ತಾನಾಗಿ ಒಲಿದು ಬಂದರೆ ಯಾಕೆ ಬೇಡ?

ಅಣ್ಣ, ಅತ್ತಿಗೆಯರ ಜೊತೆ ಐತಾಳರ ಮಧ್ಯಸ್ಥಿಕೆಯಲ್ಲಿ ಹೆಣ್ಣು ನೋಡಲು ಹೋಗುವಾಗ ರಾಮಚಂದ್ರ ವಧೂಪರೀಕ್ಷೆಯಲ್ಲ, ವರಪರೀಕ್ಷೆ ಎನ್ನುವಂತಹ ಭಾವನೆಯಿಂದ ಅಸ್ವಸ್ಥನಾಗಿದ್ದ. ತನ್ನ ಸುರೂಪದ ಕುರಿತು ಅವನಿಗೆ ನಂಬಿಕೆ ಇದೆ. ಅಭಿಮಾನವೂ ಉಂಟು. ಯಾವ ಹುಡುಗಿಯೂ ತನ್ನನ್ನು ನಿರಾಕರಿಸುವುದಿಲ್ಲ ಎನ್ನುವ ಗರ್ವ ಒಬ್ಬಳೇ ಮಗಳಾಗಿರುವವಳನ್ನು ನೋಡಲು ಹೋಗುವಾಗ ತಲೆಮರೆಸಿಕೊಂಡಿದೆ. ಹುಡುಗಿಯರು ಸಿಕ್ಕೋದು ಕಷ್ಟ ಎನ್ನುವಂತಾ ಕಾಲ ಅದಾಗಿರಲಿಲ್ಲ. ಹೆಣ್ಣು ಹೆತ್ತವರು ಯೋಗ್ಯ ಹುಡುಗನ ತಲಾಷಿನಲ್ಲಿ ತಲೆ ಕೆಡಿಸಿಕೊಳ್ಳುತ್ತಿದ್ದ ಕಾಲ. ಈಗಿನ ಹಾಗೆ ವಧೂ ವರಾನ್ವೇಷಣಾ ಕೇಂದ್ರಗಳು ಇದ್ದಿರಬಹುದಾದರೂ ಅವುಗಳೆಲ್ಲಾ ಸೀಮಿತ ಪ್ರಮಾಣದಲ್ಲಿ ಪೇಟೆ, ಪಟ್ಟಣಗಳಲ್ಲಿ ಇದ್ದಿರಬಹುದು, ಬಹುಶಃ. ಹಳ್ಳಿಮೂಲೆಗಳಲ್ಲಿರುವವರು ಯಾರನ್ನಾದರೂ ಹೇಳಿ ಕೇಳಿಯೇ ಸಂಬಂಧ ಜೋಡಿಸಿಕೊಳ್ಳಬೇಕಾದ ಕಾಲ. ಹುಡುಗನ ಮನೆಯವರು ಅಂದರೆ ತಲೆಯ ಮೇಲೆ ಕೊಂಬು. ಹುಡುಗಿಯ ಪೈಕಿಯವರನ್ನು ಹೇಗೆ ಬೇಕಾದರೂ ನಡೆಸಿಕೊಳ್ಳಬಲ್ಲ ಧಾರ್ಷ್ಟ್ಯ.. ದೊಡ್ಡಸ್ತಿಕೆ. ಆದರೆ ರಾಮಚಂದ್ರ ನೋಡಲು ಹೋಗುತ್ತಿರುವ ಕೇಸು ವಿಶೇಷದ್ದು. ಬಾಯ್ಬಿಟ್ಟು ಕೇಳದೆಯೇ ಬೇಕು ಬೇಕಾದ್ದು ದಕ್ಕುವಂತಾದ್ದು. ಖಡಕ್ಕಾಗಿ ಇಸ್ತ್ರಿ ತೀಡಿದ ಪೂರ್ತಿ ತೋಳಿನ ಶರಟು, ಪ್ಯಾಂಟು ತೊಟ್ಟಿದ್ದ ರಾಮಚಂದ್ರ ವಿನಾಕಾರಣ ಅತ್ತಿತ್ತ ಹೊಗಚಾಡುತ್ತಿರುವುದನ್ನು ರಘುರಾಮ ಗಮನಿಸಿದ್ದ. 'ಲವ್ ಮ್ಯಾರೇಜು ಅಂದ್ರೆ ಇಂತಾದ್ದೆಲ್ಲಾ ರಗಳೆ ಇರಲ್ಲ' ಕೀಟಲೆ ಮಾಡಿದ್ದ.

'ಮದುವೆಯಾಗಿ ಲವ್ ಮಾಡೋದೋ, ಲವ್ ಮಾಡಿ ಮದುವೆ ಯಾಗೋದೋ ಆಮೇಲೆ ಎಲ್ಲಾ ಒಂದೇ..' ಕಾರಿನ ಎದುರು ಸೀಟಲ್ಲಿ ಡ್ರೈವರಿನ ಪಕ್ಕ ಕೂತಿದ್ದ ಐತಾಳರು ಹದ ಹೇಳಿದ್ದರು. ಪರವಾಗಿಲ್ಲವೇ ಬ್ರಾಹ್ಮಣ, ನಿಧಾನಕ್ಕೆ ಮಾತಾಡಿಕೊಂಡಿದ್ದರೂ ಕಿವಿ ಚುರುಕಾಗುಂಟು ಎನ್ನುವಂತೆ ಹಿಂದಿನ ಸೀಟಲ್ಲಿ ಕೂತಿದ್ದ ಅಣ್ಣ, ತಮ್ಮ ಕಣ್ಣು ಮಿಟುಕಿಸಿಕೊಂಡಿದ್ದರು. ಬಾಯಿಗೆ ತತ್ಕಾಲಕ್ಕೆ ಬೀಗ ಬಿದ್ದಿತ್ತು. ರಾಮಚಂದ್ರನಷ್ಟೇ ಅವನ ಅತ್ತಿಗೆ ಭವಾನಿ ಚಡಪಡಿಸುತ್ತಿದ್ದಳಾ? ಇದ್ದುಳ್ಳವರ ಮನೆಯ ಹುಡುಗಿ ಮೈ ತುಂಬಾ ನಗ ತೊಟ್ಟುಕೊಂಡು ಮನೆ ಹೊಕ್ಕರೆ ಆ ಮನೆಯಲ್ಲಿ ತನಗೆ ಯಾವ ಸ್ಥಾನ? ಮೊದಲೇ ಅತ್ತೆಮ್ಮನಿಗೆ ಬಡತನದ ತಮ್ಮ ತೌರಿನ ಕುರಿತು ಅಸಡ್ಡೆ ಇದೆ. ಈ ಮದುವೆಯೇನಾದರೂ ಆಯ್ತು ಅಂದರೆ ಆ ಮನೆಯಲ್ಲಿ ತಾನು ಕತ್ತೆಚಾಕರಿ ಮಾಡಿಕೊಂಡಿರಬೇಕಾದ ಕಾಲ ಬಂದರೆ ಆಶ್ಚರ್ಯವಿಲ್ಲ ಎಂದು ಅತ್ತಿಗೆಗೆ ಸಹಜವಾಗಿ ಅನಿಸುತ್ತಿರಬಹುದು. ಎರಡು ವರ್ಷ ತುಂಬಿದ ಮೊಮ್ಮಗನ ಜವಾಬ್ದಾರಿಯನ್ನು ಅತ್ತೆ ವಹಿಸಿಕೊಂಡು ಸೊಸೆಯನ್ನು ಬಿಡುಬೀಸಾಗಿ ಕಳಿಸಿಕೊಟ್ಟಿದ್ದಳು. ಮೂರು ಜನ ಹೋದ್ರೆ ಮೂರು ಕಾಸಿನ ಕೆಲಸ ಆಗಲ್ಲ ಎನ್ನುವ ವಾಡಿಕೆ ಮಾತಿನ ಹಿಂದೆ ಬಿದ್ದು ಭವಾನಿ ಹೊರಡಬೇಕಾಗಿ ಬಂದಿತ್ತು. ಐತಾಳರು ಮನೆಯವರೇನಲ್ಲದಿದ್ದರೂ ಇವರ ಕೆಲಸಕ್ಕೇ ಹೊರಟಿದ್ದವರು ತಾನೇ? ಹಿಂಜರಿದಿದ್ದಳು ಭವಾನಿ,

'ನೀವೇ ಹೋಗ್ಬನ್ನಿ ಅತ್ತೆ. ನಾನು ಮನೇಲಿರ್ತೀನಿ' ಅಂದಿದ್ದಳು.

**(ಸಶೇಷ)**